## ಮುಂದಿನ ದಾರಿ ಕಾಣದಾಗಿದೆ

''ಟ್ರಾವೆಲ್ ಏಜನ್ಸಿಯಲ್ಲಿ ಕೆಲಸ ಮಾಡುತ್ತಿದ್ದ ನಾನು ಸಿನಿಮಾ ಕ್ಷೇತ್ರಕ್ಕೆ ಡ್ರೈವರ್ ಆಗಿ ಬಂದಿದ್ದು 'ಕರ್ಪೂರದ ಗೊಂಬೆ' ಸಿನಿಮಾದ ಮೂಲಕ. ಇಲ್ಲಿ ಕೆಲಸ ಮಾಡಲು ಶುರುಮಾಡಿ ಇಪ್ಪತ್ಮೂರು ವರ್ಷ ಆಯ್ತು. 'ಬೆಲ್ ಬಾಟಂ', 'ಕಿರಿಕ್ ಪಾರ್ಟಿ', 'ಬಚ್ಚನ್', 'ಉಳಿದವರು ಕಂಡಂತೆ', 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಸಿನಿಮಾಗಳಿಗೆ ಡ್ರೈವರ್ ಆಗಿ ಕೆಲಸ ಮಾಡಿದ್ದೇನೆ. 'ದನ ಕಾಯೋನು' ಸಿನಿಮಾ ಟೈಮಲ್ಲಿ ಯೋಗರಾಜ ಭಟ್ಟರನ್ನು ನಾನೇ ಸೆಟ್‌ಗೆ ಕರ್ಕೊಂಡು ಹೋಗ್ತಿದ್ದೆ''. ಹೀಗೆ ಸಿನಿಮಾ ಬಗ್ಗೆ ಮಾತಾಡುವಾಗ ಡಿ. ಕುಮಾರ ಅವರ ಕಣ್ಣುಗಳು ವಿಶೇಷ ಹೊಳಪಿನಿಂದ ಮಿನುಗುತ್ತವೆ. ಬಣ್ಣದ ಲೋಕಕ್ಕೆ ತಾವೂ ಸಂಬಂಧಿಸಿದವರು ಎಂಬ ಪುಳಕದ ಹೊಳಪದು. ಆದರೆ ಮಾತು ಗತಕಾಲದಲ್ಲಿ ಸುತ್ತಾಡಿ ವರ್ತಮಾನಕ್ಕೆ ತಾಕಿದಾಗ ಮಾತ್ರ ಮುಖದಲ್ಲಿನ ನಗು ಥಟ್ಟನೆ ಮಾಯವಾಗುತ್ತದೆ. ಈಗಷ್ಟೇ ಮಿನುಗಿದ್ದ ಕಣ್ಣುಗಳಲ್ಲಿ ಆತಂಕ ಆವರಿಸುತ್ತದೆ.

ಚಲನಚಿತ್ರ ವಾಹನ ಚಾಲಕ ಸಂಘದ ಸದಸ್ಯರೂ ಆಗಿರುವ ಕುಮಾರ್ ಅವರ ಪತ್ನಿ ಅಂಗವಿಕಲೆ. ಐದು–ಆರನೇ ತರಗತಿಯಲ್ಲಿ ಓದುವ ಇಬ್ಬರು ಮಕ್ಕಳಿದ್ದಾರೆ. ಒಂದು ದಿನ ಕೆಲಸ ಮಾಡಿದರೆ ಐನೂರು ರೂಪಾಯಿ ಬಾಟಾ ಸಿಗುತ್ತಿತ್ತು. ತಿಂಗಳಿಗೆ ಹದಿನೆಂಟಿಪ್ಪತ್ತು ದಿನ ಕೆಲಸ ಇದ್ದೇ ಇರುತ್ತಿತ್ತು. ಹಾಗಾಗಿ ಹೇಗೋ ಬದುಕು ತೂಗಿಸಿಕೊಂಡು ಹೋಗುತ್ತಿದ್ದ ಕುಮಾರ್‌ಗೆ ಸಿನಿಮಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂಬ ತೃಪ್ತಿ ಇತ್ತು. ಆದರೆ ಕೊರೊನಾ ಅವರ ನೆಮ್ಮದಿಯನ್ನು ಕಸಿದಿದೆ.

'ಕಳೆದ ವರ್ಷದ ಆರಂಭದವರೆಗೂ ಎಲ್ಲವೂ ಚೆನ್ನಾಗಿಯೇ ಇತ್ತು. ಯಾವಾಗ ಲಾಕ್‌ಡೌನ್ ಆಯಿತೋ ಬದುಕು ಹದಗೆಟ್ಟುಹೋಯಿತು. ಯಾರು ಯಾರೋ ಕೊಟ್ಟಿರುವ ರೇಷನ್; ಊಟ ತಿಂದು ಹೊಟ್ಟೆಗೊಂದು ದಾರಿ ಮಾಡಿಕೊಂಡೆವು. ಆದರೆ ದುಡಿಮೆ ಇಲ್ಲದೆ ಎಷ್ಟು ದಿನ ಬದುಕಲು ಸಾಧ್ಯ? ಮನೆ ಬಾಡಿಗೆ ಕಟ್ಟಲೂ ದುಡ್ಡಿಲ್ಲ. ಎರಡು ಮೂರು ತಿಂಗಳ ಬಾಡಿಗೆ ಉಳಿಸಿಕೊಂಡು ಬಂದಿದ್ದೇನೆ. ಈಗ ಎರಡು ತಿಂಗಳಿಂದ ತಿಂಗಳಿಗೆ ಹತ್ತು ಹನ್ನೆರಡು ದಿನವಾದರೂ ಕೆಲಸ ಸಿಗಲು ಶುರುವಾಗಿತ್ತು. ಅಂತೂ ಮತ್ತೆ ಬದುಕು ಸರಿಹೋಗ್ತಿದೆಯಲ್ಲಾ ಅಂದುಕೊಳ್ಳುವಾಗಲೇ ಮತ್ತೆ ಲಾಕ್‌ಡೌನ್ ಭಯ ಶುರುವಾಗಿದೆ. ಸಿನಿಮಾ ಕ್ಷೇತ್ರ ಬಿಟ್ಟು ಟೂರಿಸ್ಟ್ ಕರ್ಕೊಂಡು ಹೋಗೋಣ ಅಂದ್ರೆ ಈಗ ಯಾರೂ ಪ್ರವಾಸಕ್ಕೂ ಹೋಗುವುದಿಲ್ಲ. ಏನು ಮಾಡುವುದು ಗೊತ್ತಾಗ್ತಿಲ್ಲ. ಭವಿಷ್ಯವನ್ನು ನೆನಪಿಸಿಕೊಂಡರೆ ಭಯವಾಗುತ್ತದೆ' ಎನ್ನುವಾಗ ಕುಮಾರ್ ಅವರ ಧ್ವನಿ ಕಂಪಿಸುತ್ತಿತ್ತು.

ಚಿತ್ರರಂಗದ ಮೇಕಪ್ ಆರ್ಟಿಸ್ಟ್, ಜ್ಯೂನಿಯರ್ ಆರ್ಟಿಸ್ಟ್, ಅಡುಗೆ ಪೂರೈಸುವವರು ಹೀಗೆ ಸಿನಿಮಾವನ್ನು ಅವಲಂಬಿಸಿಕೊಂಡಿರುವ ಸಾವಿರಾರು ಜನರ ಬದುಕು ಹೀಗೆಯೇ ಅತಂತ್ರವಾಗಿದೆ. ಇದಲ್ಲದಿದ್ದರೆ ಇನ್ನೊಂದು ಎಂಬ ಪರಿಸ್ಥಿತಿಯಲ್ಲಿಯೂ ಅವರಿಲ್ಲ.

ಸಿನಿಮಾ ನಿರ್ಮಾಣವಾಗುವುದೂ ಕಷ್ಟವಿದೆ. ಹೀಗಾದರೆ ಮುಂದಿನ ವರ್ಷ ಚಿತ್ರರಂಗದ ಪರಿಸ್ಥಿತಿ ಏನಾಗಬಹುದು? ಅದನ್ನೇ ನಂಬಿಕೊಂಡಿರುವ ಸಾವಿರಾರು ಜನರ ಜೀವನ ಏನಾಗಬಹುದು? ಊಹಿಸಿಕೊಂಡಷ್ಟೂ ಕಲ್ಪನೆಯ ಕರಾಳಛಾಯೆ ಮೂಡುತ್ತಲೇ ಹೋಗುತ್ತದೆ.

### ಸಣ್ಣ ಸಿನಿಮಾಗಳಿಗೆ ಕಂಟಕ

'ದೊಡ್ಡ ಸಿನಿಮಾಗಳು ಹೇಗೋ ಬದುಕಿಕೊಂಡು ಬಿಡಬಹುದು. ಆದರೆ ಸಣ್ಣ ಬಜೆಟ್ ಸಿನಿಮಾಗಳಿಗಂತೂ ಪರಿಸ್ಥಿತಿ ತುಂಬ ಕಷ್ಟ ಇದೆ' ಎನ್ನುತ್ತಾರೆ ನಿರ್ದೇಶಕ, ನಿರ್ಮಾಪಕ ಹೇಮಂತ್ ರಾವ್.


ಸತ್ಯಪ್ರಕಾಶ್ ನಿರ್ದೇಶನದ 'ಮ್ಯಾನ್ ಆಫ್ ದಿ ಮ್ಯಾಚ್' ಚಿತ್ರದ ಚಿತ್ರೀಕರಣ ಸಂದರ್ಭ

'ಕೊರೊನಾ ಎರಡನೇ ಅಲೆ ಮುಗಿದು ಚಿತ್ರರಂಗ ಮತ್ತೆ ತೆರೆದ ಮೇಲೂ ಪರಿಸ್ಥಿತಿಯೇನೂ ಆಶಾದಾಯಕವಾಗಿರುವುದಿಲ್ಲ. ಬಿಡುಗಡೆಗೆ ಕಾದಿರುವ ಸಿನಿಮಾಗಳ ಸಂಖ್ಯೆ ದೊಡ್ಡದಿದೆ. ಅಲ್ಲದೆ ಎಲ್ಲ ಭಾಷೆಯ ದೊಡ್ಡ ಸಿನಿಮಾಗಳೂ ನಮ್ಮಲ್ಲಿ ಬಿಡುಗಡೆಯಾಗುತ್ತವೆ. ಹಾಗಾಗಿ ಖಂಡಿತ ಚಿತ್ರಮಂದಿರಗಳ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಸಣ್ಣ ಸಿನಿಮಾಗಳು ಬಿಡುಗಡೆಯಾಗುವುದೇ ಕಷ್ಟವಾಗುತ್ತದೆ' ಎನ್ನುವ ಹೇಮಂತ್, ಚಿತ್ರರಂಗದಲ್ಲಿ ತೆರೆಮರೆಯ ಹಿಂದೆಯೇ ಕೆಲಸ ಮಾಡುವ ಜನರ ಸಂಕಷ್ಟದ ಕುರಿತೂ ಗಮನಸೆಳೆಯುತ್ತಾರೆ.

'ಎಲ್ಲಕ್ಕಿಂತ ಕಾರ್ಮಿಕರ ಕಷ್ಟ ತುಂಬ ದೊಡ್ಡದು. ಅವರು ಈಗಾಗಲೇ ಒಂದು ವರ್ಷ ಕೆಲಸವಿಲ್ಲದೇ ಮನೆಯಲ್ಲಿ ಕೂತಿದ್ದಾರೆ. ಈಗ ಮತ್ತೆ ಕೆಲಸ ಕಳೆದುಕೊಂಡರೆ ಬದುಕು ಸಾಗಿಸುವುದೇ ದೊಡ್ಡ ಸಂಕಷ್ಟವಾಗುತ್ತದೆ. ಅವರು ಆಯಾ ದಿನದ ದುಡಿಮೆ ನೆಚ್ಚಿಕೊಂಡು ಬದುಕು ನಡೆಸುವವರು. ಅವರಿಗೆ ಯಾವುದೇ ಪೆನ್ಷನ್ ಆಗಲಿ, ಬೇರೆ ರೀತಿಯ ಸಹಾಯ ಯೋಜನೆಗಳಾಗಲಿ ಇಲ್ಲ. ಹಾಗಾಗಿ ಅವರ ಬದುಕು ದುರ್ಬರವಾಗುತ್ತದೆ' ಎಂದು ಹೇಮಂತ್ ನೋವಿನಿಂದ ಹೇಳುತ್ತಾರೆ.

### ಒಟಿಟಿ ಎಂಬ ಭ್ರಮಾವೇದಿಕೆ!

ಸಿನಿಮಾ ಎಂದರೆ ಭ್ರಮೆಯ ಒಂದು ಲೋಕವನ್ನು ಸೃಷ್ಟಿಸಿ ಇಹವನ್ನು ಮರೆಸುವ ಹಾಗೆ ಕಥೆ ಕಟ್ಟುವುದು. ಆದರೆ ಕೆಲವೊಮ್ಮೆ ಹೀಗೆ ಭ್ರಮೆಯ ಕಥೆ ಕಟ್ಟುವ ಜಾಣರೇ ಭ್ರಮೆಗೆ ಬೀಳುವುದಿದೆ. ಸದ್ಯಕ್ಕೆ ಕನ್ನಡ ಚಿತ್ರರಂಗವನ್ನು ಆವರಿಸಿರುವ ಭ್ರಮೆಯ ಹೆಸರು ಒಟಿಟಿ!

'ಒಟಿಟಿ ಬಂದಮೇಲೆ ಹೊಸಬರಿಗೆ, ಪ್ರಯೋಗಶೀಲರಿಗೆ ಒಂದು ವೇದಿಕೆ ಸಿಕ್ಕಿದೆ. ಥಿಯೇಟರ್ ರಗಳೆ, ಬಿಡುಗಡೆಯ ರಾದ್ಧಾಂತ, ಮಲ್ಟಿಪ್ಲೆಕ್ಸ್ ದೌರ್ಜನ್ಯ ಎಲ್ಲದರಿಂದ ಆಚೆಗೆ ಸಿನಿಮಾವನ್ನು ಜನರಿಗೆ ತಲುಪಿಸಬಹುದು. ಹಣವನ್ನೂ ಮಾಡಿಕೊಳ್ಳಬಹುದು' – ಇದು ಚಿತ್ರರಂಗದಲ್ಲಿ ಕಳೆದೊಂದೆರಡು ವರ್ಷಗಳಿಂದ ಜೋರಾಗಿ ಕೇಳಿಬರುತ್ತಿರುವ ಮಾತು. ಆದರೆ ಈಗಾಗಲೇ ಹಲವರಿಗೆ ಇದು ಭ್ರಮೆ ಎಂಬುದು ಮನವರಿಕೆಯೂ ಆಗಿದೆ.

'ಒಟಿಟಿ ಚಿತ್ರರಂಗದ ಸಮಸ್ಯೆಗಳಿಗೆ ಪರಿಹಾರ ಎನ್ನುವುದು ಅರ್ಧಸತ್ಯವೂ ಅಲ್ಲ; ಅದು ಸುಳ್ಳು' ಎಂದು ನಗುತ್ತಾರೆ ಹೇಮಂತ್. ''ನನ್ನ ಪರಿಚಯದವರೇ ಹಲವರು, 'ಒಟಿಟಿಯವರು ಕೊಂಡುಕೊಳ್ಳುತ್ತಾರೆ' ಎಂದು ಹೇಳಿಕೊಂಡು ಸಿನಿಮಾ ಮಾಡುವುದನ್ನು ನೋಡಿದ್ದೇನೆ. ಆದರೆ ಅದು ಅಷ್ಟು ಸರಳವಾಗಿಲ್ಲ'' ಎಂದು ಆನ್‌ಲೈನ್ ಪ್ಲಾಟ್‌ಫಾರಂಗಳ ಕುರಿತು ಗಂಭೀರವಾಗಿ ಮಾತಿಗಿಳಿಯುತ್ತಾರೆ.

'ಒಟಿಟಿ ಅವರ ಕೈಲಿ ಅಪರಿಮಿತವಾದ ಹಣ ಇದೆ. ಹಾಗಾಗಿ ಅವರು ಇರುವ ಎಲ್ಲ ಸಿನಿಮಾಗಳನ್ನೂ ತೆಗೆದುಕೊಂಡುಬಿಡುತ್ತಾರೆ ಎಂಬುದು ಭ್ರಮೆಯಷ್ಟೇ. ಥಿಯೇಟರ್, ಟೀವಿ ಚಾನಲ್‌ಗಳು ಹೇಗೆ ಒಂದಿಷ್ಟು ಲಾಜಿಕ್‌ಗಳ ಮೇಲೆ ಕೆಲಸ ಮಾಡುತ್ತವೆಯೋ ಹಾಗೆಯೇ ಒಟಿಟಿಗೂ ಒಂದು ಲಾಜಿಕ್ ಇರುತ್ತದೆ. ಅವರಿಗೆ ಆರು ತಿಂಗಳಿಗೆ, ವರ್ಷಕ್ಕೆ ಇಷ್ಟು ಬಜೆಟ್ ಎಂದು ನಿಗದಿಯಾಗಿರುತ್ತದೆ. ಆ ಬಜೆಟ್ ಮುಗಿದರೆ